ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ತ್ಯಾಜ್ಯವನ್ನು ಹಣಗಳಿಕೆಯ ಸಂಪನ್ಮೂಲವಾಗಿಸಿದ ದಾವಣಗೆರೆಯ ಅವರಗೊಳ್ಳ ಗ್ರಾಮ ಪಂಚಾಯಿತಿ

ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾಗುತ್ತದೆ. ಆದ್ದರಿಂದ ಗ್ರಾಮಗಳ ಅಭಿವೃದ್ಧಿಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸುತ್ತಾ ಬರುತ್ತಿದೆ. ಇಂತಹ ಪ್ರಮುಖ ಯೋಜನೆಗಳಲ್ಲಿ ಸ್ವಚ್ಛ ಭಾರತ್‌ಮಿಷನ್ ಗ್ರಾಮೀಣ ಕೂಡ ಪ್ರಮುಖ ಯೋಜನೆಯಾಗಿದೆ. ಜನರಿಗೆ ಸಮರ್ಪಕ ತ್ಯಾಜ್ಯ ನಿರ್ವಹಣೆ ಅರಿವಿಲ್ಲದೆ ಕಸ, ಪ್ಲಾಸ್ಟಿಕ್ ತ್ಯಾಜವನ್ನ ಎಲ್ಲೆಂದರಲ್ಲಿ ಎಸೆಯುತ್ತಾರೆ. ಇದು ಗ್ರಾಮದ ಪರಿಸರದ ಅನ್ನೈರ್ಮಲ್ಯ ಮತ್ತು ಅನಾರೋಗ್ಯಕ್ಕೆ ಕಾರಣವಾಗಿದೆ. ಬಹುತೇಕ ಗ್ರಾಮಗಳಲ್ಲಿ ಸವಾಲಾಗಿ ಪರಿಣಮಿಸಿರುವ ತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ಪರಿಹರಿಸುವಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯಶಸ್ವಿಯಾಗಿದೆ.

ದಾವಣಗೆರೆ ಜಿಲ್ಲೆಯ ದಾವಣಗೆರೆ ತಾಲೂಕಿನ ಅವರಗೊಳ್ಳ ಗ್ರಾಮ ಪಂಚಾಯಿತಿಯು ತ್ಯಾಜ್ಯದ ಸಮಸ್ಯೆಗೆ ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆ ಮೂಲಕ ಶಾಶ್ವತ ಪರಿಹಾರ ಕಂಡುಕೊಳ್ಳಲು ನಿರ್ಧರಿಸಿತು.

ಅವರಗೊಳ್ಳ ಗ್ರಾಮ ಪಂಚಾಯಿತಿಯು ಜಿಲ್ಲಾ ಕೇಂದ್ರದಿಂದ 6 ಕಿ.ಮೀ ದೂರದಲ್ಲಿದೆ. ಇದು ಚಿಕ್ಕ ಬೂದಿಹಾಳ, ದೇವರಹಟ್ಟಿ, ಆವರಗೊಳ್ಳ ಗ್ರಾಮಗಳನ್ನು ಒಳಗೊಂಡಿದೆ. ಅವರಗೊಳ್ಳ ಹೊರ ವಲಯದಲ್ಲಿರುವ ಗ್ರಾ.ಪಂ ಜಾಗದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆಯಡಿ ಸ್ವಚ್ಛ ಸಂಕೀರ್ಣ ಘಟಕವನ್ನು ನಿರ್ಮಿಸಲಾಗಿದೆ. ಈ ಘಟಕವನ್ನು ಬಳಸಿಕೊಂಡು ವೈಜ್ಞಾನಿಕವಾಗಿ ಘನ ತ್ಯಾಜ್ಯ ವಿಲೇವಾರಿ ಮೂಲಕ ಕಸದ ಸಮಸ್ಯೆಗೆ ಮುಕ್ತಿ ನೀಡುವಲ್ಲಿ, ಜೊತೆಗೆ ಕಸದಿಂದ ಹಣ ಗಳಿಸಲು ಗ್ರಾಮ ಪಂಚಾಯಿತಿ ಹೊಸ ಹೆಜ್ಜೆಯಿಟ್ಟಿದೆ.

ಈ ನಿಟ್ಟಿನಲ್ಲಿ ಕಳೆದ ೨ ವರ್ಷಗಳಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರತಿ ಗ್ರಾಮಗಳಿಂದ ಪ್ಲಾಸ್ಟಿಕ್ ಮತ್ತು ಗಾಜಿನ ಬಾಟಲಿ, ಲೋಹ ಪೇಪರ್ ರಟ್ಟು ಕಬ್ಬಿಣ, ತೆಂಗಿನ ಚಿಪ್ಪು, ಪುಸ್ತಕ ಮೊದಲಾದ ತ್ಯಾಜ್ಯವನ್ನು ಸ್ವಚ್ಛವಾಹಿನಿಯ ಮೂಲಕ ಮನೆ ಮನೆಯಿಂದ ಸಂಗ್ರಹಿಸಲಾಗುತ್ತಿದೆ, ನಂತರ ಈ ತ್ಯಾಜ್ಯವನ್ನು ವಿಂಗಡಿಸಿ ತ್ಯಾಜ್ಯವನ್ನು ಗ್ರಾಮ ಮಟ್ಟದಲ್ಲಿ ಸಮರ್ಪಕವಾಗಿ ವಿಲೇವಾರಿ ಮಾಡಲಾಗುತ್ತಿದೆ.

**ತ್ಯಾಜ್ಯದಿಂದ ಹಣ ಸಂಗ್ರಹಣೆ :**
ಸ್ವಚ್ಛ ವಾಹಿನಿಯ ಮೂಲಕ ಮೂರು ಗ್ರಾಮಗಳಿಂದ ಪ್ರತಿ ನಿತ್ಯ ಸಂಗ್ರಹವಾಗುವ ಎರಡು ಲೋಡ್ ಕಸವನ್ನು ಸ್ವಚ್ಛ ಸಂಕೀರ್ಣ ಘಟಕದಲ್ಲಿ ಸುಮಾರು 20 ವಿಧಗಳಾಗಿ ವಿಂಗಡಿಸಲಾಗುತ್ತದೆ. ಹೀಗೆ ವಿಂಗಡಿಸಿದ ತ್ಯಾಜ್ಯವನ್ನು ಮಾರಾಟ ಮಾಡುವ ಮೂಲಕ ಪ್ರತಿ ತಿಂಗಳು 16 ರಿಂದ 20 ಸಾವಿರ ರೂ. ಆದಾಯ ಬರುತ್ತಿದೆ. ಇದರೊಂದಿಗೆ ಪಂಚಾಯಿತಿ ವ್ಯಾಪ್ತಿಯ ಪ್ರತಿ ಮನೆಗೆ ರೂ. 30 ರಂತೆ ಕರವನ್ನು ವಿಧಿಸಿ ವಸೂಲಿ ಮಾಡಲಾಗುತ್ತಿದೆ. ಈ ಹಣದಿಂದಲೇ ಸಿಬ್ಬಂದಿ ವೇತನ, ವಾಹನ ನಿರ್ವಹಣೆ ಮತ್ತು ಘಟಕ ನಿರ್ವಹಣೆ , ಸುರಕ್ಷತಾ ಸಾಮಗ್ರಿ ಖರೀದಿ ಮೊದಲಾದ ವೆಚ್ಚ ಭರಿಸಲಾಗುತ್ತಿದೆ.

**ಸ್ವಚ್ಛ ಅವರಗೊಳ್ಳ ಗ್ರಾಮ ನಿರ್ಮಿಸುವಲ್ಲಿ ಪಣತೊಟ್ಟವರು:**
ಸುಮಾರು 3 ಸಾವಿರ ಮನೆಗಳಿರುವ ಅವರಗೊಳ್ಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ 2 ವಾರ್ಡ್‌ಗಳಲ್ಲಿ ಹಸಿ ಮತ್ತು ಒಣ ಕಸ ಸಂಗ್ರಹಿಸಿ ಅದನ್ನು ವಿಂಗಡನೆ ಮಾಡಲು ಒಬ್ಬ ಮೇಲ್ವಿಚಾರಕಿ, ಒಬ್ಬ ವಾಹನ ಚಾಲಕ ಸೇರಿ ಐವರು ಸಿಬ್ಬಂದಿಗಳಿದ್ದಾರೆ. ಈ ಐದು ಮಂದಿ ಇಡೀ ಗ್ರಾ.ಪಂ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾರ್ಯನಿರ್ವಹಿಸುತ್ತಾರೆ. ಜೊತೆಗೆ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜಿಪಿಎಲ್‌ಎಫ್ ಒಕ್ಕೂಟ ಸ್ವಸಹಾಯ ಸಂಘ ಮತ್ತು ಘಟಕದ ಕೆಲಸ ನಿರ್ವಹಣೆ ಮಾಡುತ್ತಿದ್ದಾರೆ.

**ಸ್ವಚ್ಛತೆಗೆ ಮಾದರಿಯಾದ ಅವರಗೊಳ್ಳ ಗ್ರಾಮ :**
ಗ್ರಾಮ ಪಂಚಾಯತಿ ಹಾಗೂ ಗ್ರಾಮಸ್ಥರ ಜವಾಬ್ದಾರಿ ನಡೆಯಿಂದ ಗ್ರಾಮದ ಚರಂಡಿಗಳಲ್ಲಿ ರಸ್ತೆ ಬದಿಗಳಲ್ಲಿ ಪ್ಲಾಸ್ಟಿಕ್ ವಸ್ತುಗಳು, ಬಾಟಲ್‌ಎಸೆಯುವುದು ಕಡಿಮೆಯಾಗಿದೆ.

**ಈ ಕುರಿತಂತೆ**,

**ಸ್ವಚ್ಛ ವಾಹಿನಿ ಸ್ವಲ್ಪ ತಡವಾಗಿ ಹೋದರು ಗ್ರಾಮಸ್ಥರು ವಿಚಾರಿಸಲು ಫೋನ್ ಮಾಡುತ್ತಾರೆ**

- ಪಿ ಸುಜಾತಾ,
ಘಟಕದ ಮೇಲ್ವಿಚಾರಕಿ

**ಮೊದಲೆಲ್ಲಾ ಗ್ರಾಮಸ್ಥರು ಒಣ ಕಸವನ್ನು ಚರಂಡಿಗೆ ಎಸೆಯುತ್ತಿದ್ದರು, ಪ್ರತಿ ಮೂರು ತಿಂಗಳಿಗೊಮ್ಮೆ ಗ್ರಾಮ ಪಂಚಾಯತಿ ವತಿಯಿಂದ ಸ್ವಚ್ಛಗೊಳಿಸಲಾಗುತ್ತಿತ್ತು. ಈಗ ಎರಡು ವರ್ಷಗಳಿಂದ ಈ ಸಮಸ್ಯೆ ಇಲ್ಲದಂತಾಗಿದೆ**

- ಜಿ.ಟಿ.ವೀರಣ್ಣ ,
ಗ್ರಾ.ಪಂ ಸದಸ್ಯ

**ನಿಮ್ಮ ಗ್ರಾಮಗಳೂ ಸ್ವಚ್ಛವಾಗಿರಲಿ,
ಗ್ರಾಮೀಣ ಪ್ರದೇಶಗಳು ಸರ್ವಾಂಗೀಣ
ಅಭಿವೃದ್ಧಿ ಸಾಧಿಸಲಿ**

## ಸ್ವಚ್ಛ ಗ್ರಾಮ, ಸ್ವಸ್ಥ ಗ್ರಾಮ.

**ಅದುವೆ ಅಭಿವೃದ್ಧಿ ಪೂರಕ ಗ್ರಾಮ**

